


# ಮಳೆಗಾಲದಲ್ಲಿ ಕಾಡುವ ಸೋಂಕು, ಅಲರ್ಜಿ...

**ಮಳೆಗಾಲದಲ್ಲಿ ಹಲವಾರು ಕಾಯಿಲೆಗಳು ಬಾಧಿಸುತ್ತವೆ. ಸೋಂಕು, ಅಲರ್ಜಿ, ವಿವಿಧ ರೀತಿಯ ಜ್ವರ, ಸಂಧಿವಾತ ಮುಂತಾದ ರೋಗಗಳು ಬರದಂತೆ ಎಚ್ಚರ ವಹಿಸಬೇಕಾದುದು ಅಗತ್ಯ.**

■ ಉಮಾ ಅನಂತ್

ಮಳೆಗಾಲದ ಆರಂಭದಲ್ಲಿ ಒಂದಲ್ಲ ಒಂದು ಆರೋಗ್ಯ ಸಮಸ್ಯೆ ಕಾಡುತ್ತಲೇ ಇರುತ್ತದೆ. ಹೀಗಾಗಿ ಮಳೆಗಾಲ ಬಂದರೆ ಯಾಕಪ್ಪಾ ಈ ಮಳೆಗಾಲ ಬರುತ್ತೋ ಎಂದು ಶಪಿಸಿಕೊಳ್ಳುವವರೇ ಹೆಚ್ಚು. ಮಕ್ಕಳಿಗೆ ಬರುವ ಸಾಮಾನ್ಯ ಕೆಮ್ಮು, ನೆಗಡಿಯಿಂದ ಹಿಡಿದು ವಯಸ್ಸಾದವರಿಗೆ ಬರುವ ದಮ್ಮು, ಸಂಧಿವಾತ ಹೆಚ್ಚುವುದು ಮಳೆಗಾಲದಲ್ಲೇ. ಸೋಂಕು, ಸಾಂಕ್ರಾಮಿಕ ರೋಗಗಳ ಹಾವಳಿಯೂ ಮಳೆಗಾಲದ್ದೇ ಬಳುವಳಿ.

ಮಳೆಗಾಲದಲ್ಲಿ ನೀರಿನಿಂದ, ಸೊಳ್ಳೆಯಿಂದ, ಇಲಿಗಳಿಂದ ಬರುವ ಕಾಯಿಲೆಗಳು ಎಲ್ಲರನ್ನೂ ಹಿಂಡಿ ಹಿಪ್ಪೆ ಮಾಡುತ್ತದೆ. ಹೀಗಾಗಿ ಮಳೆಗಾಲ ಎಂದರೆ ಮೂಗುಮುರಿವವರ ಸಂಖ್ಯೆಯೇ ಅಧಿಕ.

‘ಮುಂಗಾರಿನ ಆರಂಭ ಎಂದರೆ ಅದು ಸೊಳ್ಳೆಗಳ ಸಂತಾನಾಭಿವೃದ್ಧಿಯ ಪರ್ವ ಕಾಲ ಎಂದೇ ಹೇಳಬಹುದು. ಮಳೆಗಾಲದಲ್ಲಿ ಅನೇಕ ತರದ ಸಾಂಕ್ರಾಮಿಕ ರೋಗಗಳು ಹರಡುತ್ತವೆ. ಕೆಲವು ಸೊಳ್ಳೆಯಿಂದ ಬರುವಂಥವು, ಇನ್ನು ಕೆಲವು ನೀರಿನಿಂದ ಬರುವ ಸಾಂಕ್ರಾಮಿಕ ರೋಗಗಳು ಜನರನ್ನು ಅತಿಯಾಗಿ ಕಾಡುತ್ತವೆ. ಡೆಂಗಿ, ಚಿಕುನ್‌ಗುನ್ಯಾ, ಟೈಫಾಯಿಡ್, ಕಾಲರಾ, ಆಸ್ತಮಾ, ಸಂಧಿವಾತ, ವಿವಿಧ ರೀತಿಯ ಜ್ವರಗಳು... ಎಲ್ಲವೂ ಮಳೆಗಾಲದಲ್ಲೇ ಕಾಡುವಂಥವು’ ಎಂದು ವಿವರ ನೀಡುತ್ತಾರೆ ಶಿವಮೊಗ್ಗದಲ್ಲಿ ಫಿಸೀಷಿಯನ್ ಆಗಿರುವ ಡಾ. ಶ್ರೀಕಾಂತ್ ಹೆಗಡೆ.

‘ಈ ಎಲ್ಲ ರೋಗಗಳಿಗೆ ಪ್ರಮುಖ ಕಾರಣ ಮಳೆಗಾಲದಲ್ಲಿ ಹಳ್ಳಗುಂಡಿಗಳಲ್ಲಿ, ಪ್ಲಾಸ್ಟಿಕ್ ಡಬ್ಬಗಳಲ್ಲಿ, ತೆಂಗಿನ ಚಿಪ್ಪುಗಳಲ್ಲಿ ನೀರು ನಿಂತು ಸೊಳ್ಳೆಗಳ ಉತ್ಪತ್ತಿಯಾಗುವುದು, ನದಿಗಳಿಂದ ಸಂಗ್ರಹಿಸಿದ ನೀರು ನಲ್ಲಿಯಲ್ಲಿ ಬರುವಾಗ ಸೋಂಕು ಅಡರುವುದು ಇಲಿಗಳಿಂದ ಬರುವ ಲೆಪ್ಟೊಸ್ಪೈರೊಸಿಸ್ ರೋಗ ಮಳೆಗಾಲದಲ್ಲೇ ಹರಡುವುದು ಹೆಚ್ಚು’ ಎನ್ನುತ್ತಾರೆ ಈ ವೈದ್ಯರು.

‘ಇವೆಲ್ಲವುಗಳ ಜೊತೆಗೆ ವೈರಲ್ ಹೆಪಟೈಟಿಸ್ ಯಕೃತ್ತಿಗೆ ಬರುವ ಕಾಯಿಲೆ. ಇದು ಕಲುಷಿತ ನೀರು ಕುಡಿಯುವುದರಿಂದ ಬರುತ್ತದೆ. ಜಾಂಡಿಸ್ ಕೂಡ ಬರಬಹುದು. ಇನ್‌ಫ್ಲುಯೆಂಜಾದಂತಹ ಕಾಯಿಲೆಯೂ ಮಳೆಗಾಲದಲ್ಲೇ ಬಾಧಿಸುವುದು ಹೆಚ್ಚು. ಭಾರತದಲ್ಲಿ ಇದು ಮಳೆಗಾಲದ ಚಳಿಗಾಳಿಯ ಸೆಳೆತಕ್ಕೆ ಹೆಚ್ಚು ಬಾಧಿಸಿದರೆ, ಅಮೆರಿಕದಂಥ ರಾಷ್ಟ್ರಗಳಲ್ಲಿ ಚಳಿಗಾಲದಲ್ಲಿ ಬರುತ್ತದೆ’ ಎಂಬುದು ಡಾ. ಶ್ರೀಕಾಂತ್ ಅವರ ಅಭಿಪ್ರಾಯ.

‘ಲೆಪ್ಟೊಸ್ಪೈರೊಸಿಸ್ ಎಂದರೆ ಇಲಿ ಜ್ವರ. ಇದು ಮಳೆಗಾಲದ ಪ್ರಾರಂಭದಲ್ಲಿ ಬರುತ್ತದೆ. ಇಲಿ ಮಲ ಮೂತ್ರ ಮಾಡಿದ ಜಾಗದಲ್ಲಿ ನಡೆದುಕೊಂಡು ಹೋಗುವಾಗ